

# ಭಾರವಾದ ಬಂಡೆಗಲ್ಲು ಯೆರೂಸಲೇಮು

## ನುಡಿಯಲ್ಪಟ್ಟ ಪ್ರವಾದನೆ

ಯೆರೂಸಲೇಮಿನ ವಿಷಯವಾಗಿ ಯೆಹೋವನು ನುಡಿದ ವಾಕ್ಯ ಭಾರ : ಆಕಾಶವನ್ನು ಹರವಿ ಭೂಲೋಕಕ್ಕೆ ಅಸ್ತಿವಾರವನ್ನು ಹಾಕಿ ಮನುಷ್ಯನೊಳಗೆ ಜೀವಾತ್ಮವನ್ನು ಸೃಷ್ಟಿಸುವ ಯೆಹೋವನು ಇಂತೆನ್ನುತ್ತಾನೆ– ಆಹಾ! ನಾನು ಯೆರೂಸಲೇಮನ್ನು ಸುತ್ತಣ ಸಕಲ ಜನಾಂಗಗಳಿಗೆ ಅಮಲೇರಿಸಿ ಓಲಾಡಿಸುವ ಭೋಗುಣಿಯನ್ನಾಗಿ ಮಾಡುವೆನು. ಯೆರೂಸಲೇಮಿಗೆ ಮುತ್ತಿಗೆ ಹಾಕುವಾಗ ಯೆಹೂದಕ್ಕೂ ಇಕ್ಕಟ್ಟಾಗುವದು. ಆ ದಿನದಲ್ಲಿ ನಾನು ಯೆರೂಸಲೇಮನ್ನು ಸಮಸ್ತ ಜನಗಳಿಗೂ ಭಾರೀ ಬಂಡೆಯನ್ನಾಗಿ ಮಾಡುವೆನು : ಅದನ್ನೆತ್ತುವವ ರೆಲ್ಲರಿಗೂ ಕಡುಗಾಯವಾಗುವದು; ಲೋಕದ ಸಕಲ ರಾಜ್ಯಗಳು ಅದನ್ನೆತ್ತಿ ಹಾಕಲು ಕೂಡಿಬರುವವು. ಯೆಹೋವನು ಇಂತೆನ್ನುತ್ತಾನೆ– ಆ ದಿನದಲ್ಲಿ ನಾನು ಎಲ್ಲಾ ಕುದುರೆಗಳಿಗೆ ತಬ್ಬಿಬ್ಬನ್ನು ಉಂಟುಮಾಡುವೆನು, ಸವಾರರನ್ನು ಭ್ರಮೆಗೊಳಿಸುವೆನು; ಯೆಹೂದವಂಶವನ್ನು ಕಟಾಕ್ಷಿಸಿ ಜನಾಂಗಗಳ ಅಶ್ವಗಳನ್ನೆಲ್ಲಾ ಕುರುಡು ಮಾಡುವೆನು. ಆಗ ಯೆಹೂದದ ಕುಲಪತಿಗಳು ಮನಸ್ಸಿನೊಳಗೆ ಯೆರೂಸಲೇಮಿನವರು ತಮ್ಮ ದೇವರೂ ಸೇನಾಧೀಶ್ವರನೂ ಆದ ಯೆಹೋವನಲ್ಲಿ ಬಲಗೊಂಡು ನಮಗೆ ಪ್ರಾಣವಾಗಿದ್ದಾರೆ ಅಂದುಕೊಳ್ಳುವರು. (ಜೆಕರ್ಯ 12:1–5)

ಯೆರೂಸಲೇಮು ಎಂಬುದು ಯೆಹೂದ್ಯದಲ್ಲಿರುವಂತ ಒಂದು ಪಟ್ಟಣ ಮಾತ್ರವೆ. ಒಂದು ದೇಶದಲ್ಲಿರುವಂತ ಒಂದು ಚಿಕ್ಕ ಪಟ್ಟಣ. ಬಹು ದೇಶಗಳವರು ಒಂದುಗೂಡಿ ವಿರೋಧಿಸುವ ಮಟ್ಟಿಗೆ ಭಾರವಾದ ಬಂಡೆಯಾಗುತ್ತದೆ ಎಂಬುದು ಬಹು ಅಚ್ಚರಿಯನ್ನುಂಟುಮಾಡುವ ಸುದ್ದಿಯೆ. ಯೆಹೂದ್ಯವೆಂಬ ದೇಶವಲ್ಲಾ, ಅದರಲ್ಲಿರುವಂತ ಒಂದು ಚಿಕ್ಕ ಪಟ್ಟಣವೆ ಬಹು ದೇಶಗಳು ವಿರೋಧಿಸುವ ಇಕ್ಕಟ್ಟಾಗುತ್ತದೆ ಎಂಬುದೇ ಜೆಕರ್ಯನ ಪ್ರವಾದನೆ. ಇಸ್ರಾಯೇಲ್ ದೇಶವು 1948 ಬೇರ್ಪಟ್ಟ ಒಂದು ದೇಶವಾಗಿ ಪ್ರಕಟಿಸಲ್ಪಟ್ಟರೂ, ಅದರ ರಾಜಧಾನಿಯಾಗಿ ಯೆರೂಸಲೇಮನ್ನು ಪ್ರಕಟಿಸಲ್ಪಡದೆ, ಟೆಲ್–ಅವೀವಾ ಎಂಬ ಪಟ್ಟಣವು ಪ್ರಕಟಿಸಲ್ಪಟ್ಟದೆ. ಇದಕ್ಕೆ ಕಾರಣ ಯೆರೂಸಲೇಮು, ಲೋಕದ ದೊಡ್ಡ ಮತಗಳಾದ ಯೆಹೂದ್ಯ ಮತ, ಇಸ್ಲಾಮ್ ಮತ ಹಾಗೂ ಕ್ರೈಸ್ತಮತಗಳಿಗೆ ಬಹು ಪ್ರಾಮುಖ್ಯವಾದ ಪುಣ್ಯ ಪಟ್ಟಣವಾಗಿದೆ. ಪ್ಯಾಲೇಸ್ತೀನಿನವರಿಗೆ ಯೆರೂಸಲೇಮ್ ಪಟ್ಟಣವು ತಮ್ಮ ಭವಿಷ್ಯದ ರಾಜಧಾನಿ ಎಂದುಕೊಂಡು ಬಹುಕಾಲದಿಂದ ಯುದ್ಧಮಾಡುತ್ತಾ ಬರುತ್ತಿದ್ದಾರೆ. ಈ ಒಂದು ಸ್ಥಿತಿಯಲ್ಲಿ ಅಮೇರಿಕಾವು ಯೆರೂಸಲೇಮು ಇಸ್ರಾಯೇಲಿನ ರಾಜಧಾನಿ ಎಂದು ಪ್ರಕಟಿಸಿದೆ. ಇದು ಇಂದಿಗೆ ಇಸ್ರಾಯೇಲಿನ ಯುದ್ಧಕ್ಕೂ, ಕಲಹಗಳಿಗೂ ಕಾರಣವಾಗಿ ಪರಿಣಮಿಸುತ್ತದೋ ಎಂಬ ಭಯ ಉಂಟಾಗಿದೆ. ಸುತ್ತಲಿರುವ ಪೂರ್ವಭಾಗದ ದೇಶಗಳು ಮತ್ತು ಚೀನಾದೊಂದಿಗೆ ಅನೇಕ ದೇಶಗಳು ಇದಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತಾ ಬರುತ್ತಿವೆ. ಇಸ್ರಾಯೇಲಿಗೆ ಯೆರೂಸಲೇಮ್ ರಾಜಧಾನಿ ಎಂದು ಪ್ರಕಟಿಸಲ್ಪಟ್ಟರೆ ಯೆರೂಸಲೇಮಿನಲ್ಲಿ ರಕ್ತದ ಪ್ರವಾಹ ಹರಿಯುತ್ತದೆ ಎಂದು ಅಲ್–ಖೈದಾ ನಂತಹ ಭಯೋತ್ಪಾದನ ಸಂಘಟನೆಗಳು ವ್ಯಕ್ತಪಡಿಸಿವೆ. ಜೆಕರ್ಯನ ಪ್ರವಾದನೆ ನೆರವೇರಬೇಕಾದದ್ದೆ, ಅದರೂ ಕಾಲಕ್ಕೆ ಮುಂಚಿತವಾಗಿ ಈ ಅನಾಹುತಗಳನ್ನು ಉಂಟುಮಾಡಿ, ಯೆಹೂದದಲ್ಲಿ ದೇವರು ಮಾಡಲು ಉದ್ದೇಶಿಸಿರುವ ಕಾರ್ಯಗಳನ್ನು ಸೈತಾನನು ಸ್ಥಗಿತಗೊಳಿಸಲಿಕ್ಕಾಗದಂತೆ ಯೆರೂಸಲೇಮಿನ ಸಮಾಧಾನಕ್ಕಾಗಿ ಪ್ರಾರ್ಥಿಸಿರಿ.

## ಪ್ರಾರ್ಥನಾ ಮನವಿ

01. ಯೆರೂಸಲೇಮಿನ ಬಗ್ಗೆ ಜೆಕರ್ಯ ಪ್ರವಾದಿಯ ಮೂಲಕ ನುಡಿಯಲ್ಪಟ್ಟಿರುವಂತ ವಾಕ್ಯಗಳು ನೆರವೇರುವ ಕಾಲಕ್ಕೆ ಮುಂಚೆಯೆ ಈ ಅನಾಹುತಗಳನ್ನು ಉಂಟುಮಾಡುವದರ ಮೂಲಕ ದೇವರು ಇಸ್ರಾಯೇಲಿನಲ್ಲಿ ಮಾಡಲು ನೆನೆಸಿರುವ ಕಾರ್ಯಗಳನ್ನು ಸ್ಥಗಿತಗೊಳ್ಳಲಿಕ್ಕಾಗುವಂತೆ ಮಾಡಲು ನೆನೆಸಿರುವ ಸೈತಾನನ ತಂತ್ರಗಳನ್ನು ದೇವರು ವಾರ್ಪಡಿಸಲಿಕ್ಕಾಗುವಂತೆ ಪ್ರಾರ್ಥಿಸಿರಿ.

02. ಯೆರೂಸಲೇಮ್ ಇಸ್ರಾಯೇಲಿನ ರಾಜಧಾನಿಯಾಗಿ ಅಮೇರಿಕಾ ಪ್ರಕಟಿಸಿರುವದರ ನಿಮಿತ ದೇಶದಲ್ಲಿ ಭಯದ ವಾತಾವರಣ ಉಂಟಾಗಲು ತೊಡಗಿದೆ. ದೇವರು ಇಸ್ರಾಯೇಲಿನ ಸಮಾಧಾನವನ್ನು ಕಾಯುವಂತೆ ಪ್ರಾರ್ಥಿಸಿರಿ.

03. ಯೆರೂಸಲೇಮಿನ ಗೊಂದಲಗಳನ್ನು ಕಾರಣವನ್ನಾಗಿಟ್ಟುಕೊಂಡು ಹಾಂಶ್– ಅಲ್‌ಖೈದಾ ನಂತಹ ಭಯೋತ್ಪಾದನ ಸಂಘಟನೆಗಳು ದೇಶದಲ್ಲಿ ಯುದ್ಧವನ್ನು ಆರಂಭಿಸದಂತೆಯೂ, ಯೆರೂಸಲೇಮಿಗೆ ಮಾತ್ರವಲ್ಲ, ಅಮೇರಿಕಾದ ಈ ಪ್ರಕಟಣೆಗೆ ಸಹಾಯದ ಹಸ್ತನೀಡುವ ಯಾವ ದೇಶಕ್ಕೂ ಇವರ ಯುದ್ಧ ಸಂಭವಿಸದಂತೆಯೂ ತಡೆಯಾಗುವಂತೆ ಪ್ರಾರ್ಥಿಸಿರಿ.

04. ಯೆರೂಸಲೇಮಿನ ಈ ವ್ಯವಹಾರದ ಕಾರಣದಿಂದ ಇಸ್ರಾಯೇಲಿನಲ್ಲಿಯೂ, ಅದರ ಸುತ್ತಣ ದೇಶಗಳಲ್ಲೂ ಯುದ್ಧದ ವಾತಾವರಣ ಉಂಟಾಗದಂತೆ ದೇವರು ತನ್ನ ಜನರನ್ನು ಕಾಯ್ದುಕೊಳ್ಳಲಿಕ್ಕಾಗುವಂತೆಯೂ ಪ್ರಾರ್ಥಿಸಿರಿ.

05. ಇಸ್ರಾಯೇಲಿನ ಆಮದು ಎಂಬುದು ಯೆರೂಸಲೇಮಿನ ಪ್ರವಾಸವೆಂಬ ಪುಣ್ಯಯಾತ್ರೆ ಎಂಬುದರ ಮೂಲಕ ಉಂಟಾಗುತ್ತದೆ. ಯೆರೂಸಲೇಮನ್ನು ಮುಖ್ಯಗುರಿಯನ್ನಾಗಿಟ್ಟುಕೊಂಡು ಕಲಹಗಳನ್ನು ಉಂಟುಮಾಡಿದರೆ ದೇಶದ ಆಮದು ಭಾದೆ ಹೊಂದುವದರೊಂದಿಗೆ, ಅನೇಕ ಜನರ ಜೀವನಾಧಾರ ಭಾದೆಗೊಳಪಡುತ್ತದೆ. ಮಾತ್ರವಲ್ಲದೆ, ಯೆರೂಸಲೇಮಿಗೆ ಯಾತ್ರೆ ಬರುವವರು ಕೂಡ ಸಮಾಧಾನದಿಂದ ಹಿಂತಿರುಗದ ಮಟ್ಟಿಗೆ ಬಹು ಕಠಿಣ ಸನ್ನಿವೇಶವುಂಟಾಗಿ ಬಿಡುತ್ತದೆ. ದೇವರು ಸನ್ನಿವೇಶವನ್ನು ಸರಿಪಡಿಸಲು ಪ್ರಾರ್ಥಿಸಿರಿ.